ಆ) ಸದರಿ ಜಮೀನುಗಳನ್ನು ಆಯಾ ರೈತರಿಗೆ ಹಿಂದಿರುಗಿಸುವ ಯೋಚನೆ ಸರ್ಕಾರಕ್ಕಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

ಅ) ತರೀಕೆರೆ ತಾಲ್ಲೂಕಿನಲ್ಲಿ ಕಂದಾಯ ಕೊಡದೆ ಇರುವ ೨೬೯ ರೈತರ ಬಾಬ್ತು ೮೫೯ ಎಕರೆ ೧೪ ಗುಂಟೆ ೧೯೨೫ ರಿಂದ ೧೯೬೫ರ ಅವಧಿಯಲ್ಲಿ ಸರ್ಕಾರಕ್ಕೆ ಬಂದಿರುತ್ತದೆ. ತದನಂತರ ಯಾವುದೇ ಜಮೀನನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡಿರುವುದಿಲ್ಲ.

ಆ) ಸದರಿ ಜಮೀನುಗಳನ್ನು ಪುನರ್ ಮಂಜೂರಾತಿ ಮಾಡಲು ಭೂ ಕಂದಾಯದ ನಿಯಮ ೧೯೬೬ರ ನಿಯಮ ೧೧೯ರ ಪ್ರಕಾರ ಅವಕಾಶವಿರುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.— ಇದಕ್ಕೆ ಮೊನ್ನೆ ದಿವಸ ಉತ್ತರ ಕೊಟ್ಟಿದ್ದೇನೆ, ಮಾನ್ಯ ಸದಸ್ಯರು ಈ ಬಗ್ಗೆ ಮರು ಆಲೋಚನೆ ಮಾಡಬೇಕೆಂದು ಹೇಳಿದ್ದಾರೆ. ಮರು ಆಲೋಚನೆ ಮಾಡುತ್ತೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ.— ಬಗರ್‌ಹುಕುಂ ಪ್ರಕಾರ.....

ಶ್ರೀ ಎಸ್. ಆರ್. ಬೊಮ್ಮಾಯಿ.— ಬಗರ್‌ಹುಕುಂ ಬೇರೆ ಇದು ಬೇರೆ. ಅತಿಕ್ರಮಣ ಮಾಡಿದವರಿಗೆ ಭೂಮಿಯನ್ನು ಕೊಡುವ ಬಗ್ಗೆ ಸರ್ಕಾರ ಆಲೋಚನೆ ಮಾಡುತ್ತದೆ.

ಅಧ್ಯಕ್ಷರು.— ಶ್ರೀ ಎಂ. ಎಸ್. ಕೃಷ್ಣನ್ ಅವರೇ, ನಿಮ್ಮ ಪ್ರಶ್ನೆಗೆ (ಸಂಖ್ಯೆ ೭೩೮) ಉತ್ತರ ಬಂದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ಸರ್ಕಾರದ ಹತ್ತಿರ ಉತ್ತರ ಇದೆ.

ಶ್ರೀ ಎಸ್. ಕೆ. ಕಾಂತಾ.— ಇದು ಬಹುಶ: ಪ್ಲಾನಿಂಗ್‌ಗೆ ಬರುತ್ತದೆ ಎಂದು ನನಗನ್ನಿಸುತ್ತದೆ

ಶ್ರೀ ಎಂ. ಎಸ್. ಕೃಷ್ಣನ್.— ಇದು ಪ್ಲಾನಿಂಗ್‌ಗೆ ಬರುವುದಿಲ್ಲ. ಸರ್ವೆ ಮಾಡತಕ್ಕಂಥದ್ದು ಕಾರ್ಮಿಕರ ಇಲಾಖೆಗೇ ಬರುತ್ತದೆ. ಪ್ಲಾನಿಂಗ್ ಡಿಪಾರ್ಟ್‌ಮೆಂಟಿಗೆ ಅಲ್ಲ. ಉತ್ತರವನ್ನು ತರಿಸಿ ಕೊಡುತ್ತೀರಾ ?

ಅಧ್ಯಕ್ಷರು.— ತರಿಸಿಕೊಡುತ್ತೇನೆ.

ಕೆ. ಜಿ. ಎಫ್. ನಲ್ಲಿರುವ ಕೈಗಾರಿಕಾ ತರಬೇತಿ ಕೇಂದ್ರ

೩೮೭. ಶ್ರೀ ಟಿ. ಎಸ್. ವರಣಿ (ಕೆ. ಜಿ. ಎಫ್).— ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೆ. ಜಿ. ಎಫ್. ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಸ್ಥಾನವನ್ನು ಹೆಚ್ಚಿಸಬೇಕಾಗಿರುವ ಅವಶ್ಯಕತೆ ಬಗ್ಗೆ ಸರ್ಕಾರಕ್ಕೆ ತಿಳಿದಿದೆಯೇ ?

ಆ) ಹಾಗಿದ್ದಲ್ಲಿ, ಸರ್ಕಾರವು ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಎಸ್. ಕೆ. ಕಾಂತಾ (ಕಾರ್ಮಿಕ ಸಚಿವರು).—

ಅ) ಬೇಡಿಕೆಯ ಬಗ್ಗೆ ಸರ್ಕಾರಕ್ಕೆ ತಿಳಿದಿದೆ.

ಆ) ೧. ೧೯೮೪ರಲ್ಲಿ ಶಿನೇ ಪಾಳಿ ಪ್ರಾರಂಭಿಸಿದೆ –೧೩೨ ಸೀಟುಗಳು ಪೆಚ್ಚಿಸಿದೆ.

೨. ೧೯೮೪ರಲ್ಲಿ ದೇವರಾಯನ ಸಮುದ್ರದಲ್ಲಿ ಇನ್ನೂ ಒಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಪ್ರಾರಂಭಿಸಿದೆ.

೩. ಅಧಿಕೃತ ಮಾನ್ಯತೆ ಪಡೆದ ೩ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಸೇರಿದಂತೆ ಕೋಲಾರ ಜಿಲ್ಲೆಯಲ್ಲಿ ೯ ಕೈಗಾರಿಕಾ ತರಬೇತಿ ಸಂಸ್ಥೆಗಳಿವೆ.

ಶ್ರೀ ಟಿ. ಎಸ್. ಮಣಿ.—ಈ ಐ.ಟಿ.ಐ.ಗಳಲ್ಲಿ ಒಟ್ಟು ಸೀಟುಗಳು ಎಷ್ಟು ಇವೆ ?

ಶ್ರೀ ಎಸ್. ಕೆ. ಕಾಂತಾ.—ಅಧ್ಯಕ್ಷರೇ, ಟೋಟಲ್ ಇನ್‌ಟೇಕ್ ೨೯೭ ಅಭ್ಯರ್ಥಿಗಳನ್ನು ತೆಗೆದು ಕೊಳ್ಳಬಹುದು. ಆದರೆ ಇಲ್ಲಿ ಸೇರಿಸಿರತಕ್ಕಂಥ ಹುಡುಗರ ಸಂಖ್ಯೆ ೪೫೬ ಇದೆ. ಈಗಾಗಲೇ ನಾವು ಬೇರೆಬೇರೆ ರೀತಿಯಿಂದ ಇನ್ನೂ ೨೦ ಪರ್ಸೆಂಟ್ ಸೀಟುಗಳನ್ನು ಹೆಚ್ಚಿಗೆ ನೀಡಲು ಆದೇಶವನ್ನು ಕೊಡಲು ವಿಚಾರ ಮಾಡಿದ್ದೇವೆ.

ಶ್ರೀ ಟಿ. ಎಸ್. ಮಣಿ.—ಇಲ್ಲಿ ಟ್ರೇಡ್‌ಗಳನ್ನು ಹೆಚ್ಚು ಮಾಡಬೇಕೆಂದು ಬೇಡಿಕೆಯನ್ನು ಸಲ್ಲಿಸಿದ್ದರು. ಸರ್ಕಾರ ಇದನ್ನು ಪರಿಗಣನೆ ಮಾಡಿದೆಯೇ ?

ಶ್ರೀ ಎಸ್. ಕೆ. ಕಾಂತಾ.—ದಿನಾಂಕ ೧೩–೧೦–೮೬ರಂದು ಶ್ರೀ ಮಣಿಯವರು ಒಂದು ಪತ್ರ ಬರೆದಿದ್ದರು. ವೆಲ್ಡಿಂಗ್, ಯಂತ್ರಗಾರಿಕೆ ಘಟಕವನ್ನು ಮಾಡಬೇಕೆಂದು ಕೇಳಿದ್ದರು, ಇದನ್ನು ಮುಂದಿನ ವರ್ಷ ಮಾಡಲು ಪ್ರಯತ್ನ ಮಾಡುತ್ತೇನೆ.

ಕಾರವಾರದಲ್ಲಿ ಪುನರ್ವಸತಿ ಕಾರ್ಯಕ್ಕಾಗಿ ಕೇಂದ್ರದ ಸಹಾಯ

೧೯೭. ಶ್ರೀ ಪ್ರಭಾಕರ್ ಎಸ್. ರಾಣೆ. (ಕಾರವಾರ).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಾರವಾರದ "ಸಿ ಬರ್ಡ್" ನೌಕಾನೆಲೆಯ ಸಂಬಂಧದಲ್ಲಿ ಪರಿಹಾರ ಮತ್ತು ಪುನರ್‌ವಸತಿಗಾಗಿ ಕೇಂದ್ರ ಸರಕಾರದಿಂದ ರಾಜ್ಯ ಸರಕಾರಕ್ಕೆ ಎಷ್ಟು ಹಣ ಸಂದಾಯವಾಗಿದೆ ಮತ್ತು ಯಾವಾಗ ಸಂದಾಯವಾಗಿದೆ ?

ಆ) ಇದರಲ್ಲಿ ಈವರೆಗೆ ಎಷ್ಟು ಹಣವನ್ನು ರಾಜ್ಯ ಸರಕಾರ ಯಾವ ಉದ್ದೇಶಕ್ಕೆ ವೆಚ್ಚ ಮಾಡಿದೆ ?

ಇ) ಸದರಿ ಹಣವನ್ನು ಕೇಂದ್ರ ಸರಕಾರವು ನೇರವಾಗಿ ಉತ್ತರ ಕನ್ನಡ ಜಿಲ್ಲಾಧಿಕಾರಿಗಳ ಖಾತೆಗೆ ಜಮಾ ಮಾಡಿದ್ದು ನಿಜವೆ? ಆದನ್ನು ನಂತರ ರಾಜ್ಯ ಸರಕಾರ ಖಜಾನೆಗೆ ಯಾವ ಕಾರಣಕ್ಕಾಗಿ ವರ್ಗಾವಣೆ ಮಾಡಿತು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಸಚಿವರು).—

ಅ) ೧) ದಿನಾಂಕ ೮–೧೧–೧೯೮೬ ರಂದು, ಕೇಂದ್ರ ಸರ್ಕಾರವು ಖಾಸಗಿ ಜಮೀನುಗಳನ್ನು ಸ್ವಾಧೀನ ಪಡಿಸಿಕೊಳ್ಳುವ ಸಲುವಾಗಿ ಅಂದಾಜು ವೆಚ್ಚದ ೮೦ ರಷ್ಟು ಹಣವಾದ ೧೫.೮೭ ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿದ್ದಾರೆ.

೨) ದಿನಾಂಕ ೫–೧೧–೧೯೮೭ರಂದು ಕೇಂದ್ರ ಸರ್ಕಾರವು ಸ್ಥಳಾಂತರಗೊಳ್ಳುವ ಜನರ ಪುನರ್ವಸತಿಯನ್ನು ಕಲ್ಪಿಸುವ ಸಲುವಾಗಿ ಅಂದಾಜು ವೆಚ್ಚವಾದ ರೂ. ೭೦.೪೯ ಕೋಟಿ ಹಣವನ್ನು ಬಿಡುಗಡೆ ಮಾಡಿದ್ದಾರೆ.

ಆ) ಭೂಸ್ವಾಧೀನ ಅಧಿಸೂಚನೆಯನ್ನು ಪತ್ರಿಕೆಗಳಲ್ಲಿ ಮುದ್ರಿಸುವ ವೆಚ್ಚ, ಕಛೇರಿ ಸ್ಟೇಷನರಿ ಮತ್ತು ಇತರೆ ವೆಚ್ಚಗಳನ್ನು ಭರಿಸಲು ರೂ. ೧೮,೨೧,೪೪೫ ಗಳನ್ನು ಬಿಡುಗಡೆ ಮಾಡಿದೆ.

ಇ) ಇದೆ, ಕೇಂದ್ರ ಸರ್ಕಾರದಿಂದ ಜಿಲ್ಲಾಧಿಕಾರಿ, ಕಾರವಾರ ಇವರ ಪರವಾಗಿ ಬಿಡುಗಡೆ ಮಾಡಿದೆ ಹಣವನ್ನು ರಾಜ್ಯ ಸರ್ಕಾರದ ಖಜಾನೆಗೆ ಸಾಮಾನ್ಯ ನಡವಳಿ ಪ್ರಕಾರ ಜಮಾ ಮಾಡಲಾಗಿದೆ.

ಶ್ರೀ ಪ್ರಭಾಕರ್ ಎಸ್. ರಾಣೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕೇಂದ್ರ ಸರ್ಕಾರವು ಈ ನೌಕಾ ನೆಲೆಯ ಯೋಜನೆಗಾಗಿ ಪರಿಹಾರ ಮತ್ತು ಪುನರ್‌ವಸತಿಗಾಗಿ ಒಟ್ಟು ೨೨.೯೧ ಕೋಟಿ ಬಿಡುಗಡೆ ಮಾಡಿದ್ದಾರೆ ಎಂದು ಹೇಳಿದ್ದಾರೆ. ಇದರಲ್ಲಿ ಇಪ್ಪತ್ತು ೧೮ ಲಕ್ಷ ೨೧ಸಾವಿರದ ಐನೂರು ರೂಪಾಯಿಗಳನ್ನು ಬಿಡುಗಡೆ ಮಾಡಿದ್ದರು. ನಾನು ಇಲ್ಲಿ ಕೇಳುತ್ತಿರುವುದು ಏನೆಂದರೆ ೩೧–೩–೮೭ ರಿಂದ ನಂತರ ಮಾರ್ಚ್ ತಿಂಗಳ ಕೊನೆಯಲ್ಲಿ ಮತ್ತು ಮಾರ್ಚ್ ತಿಂಗಳಲ್ಲಿ ಏನು ಸ್ಟೇಷನರಿ ಮತ್ತು ಇತರೆ ವೆಚ್ಚಗಳು ಅಂದರೆ ಈ ಕಾರ್ಯಕ್ಕಾಗಿ ಉಪಯೋಗಿಸಿದ ಹಾಗೂ ವಾಹನಗಳಿಗಾಗಿ ವೆಚ್ಚ ಮಾಡಿದ ಬಿಲ್‌ಗಳನ್ನು ತಡೆಹಿಡಿದದ್ದು ನಿಜವೇ ?